ಅದಾ 148/2016 ಪಿ.ಡಬ್ಲ್ಯು:1 ದಿಃ 28-08-2023.

**ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

ಪಾಟೀ ಸವಾಲು ಃ ಶ್ರೀ ಕೆ ಎಂ ಜಿ ಪ್ರತಿವಾದಿ ಪರ ವಕೀಲರಿಂದಃ

ನಾನು ಪದವಿಧರ. ನಾನು ಜಮೀನಿಗೆ ಸಂಬಂಧಿಸಿದಂತೆ ನೊಂದಣಿ ಮಾಡಿಕೊಡುವಂತೆ ದಾವೆ ಹೂಡಿರುತ್ತೇನೆ. ಪ್ರತಿವಾದಿಗಳು ಅವಿದ್ಯಾವಂತರು ಎಂದರೆ ನನಗೆ ಗೊತ್ತಿಲ್ಲ.1 ನೇ ಪ್ರತಿವಾದಿ ವಕಾಲತ್ ಮತ್ತು ಅವರ ಲಿಖಿತ ವಾದಪತ್ರಕ್ಕೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಹಾಕಿದ್ದು 2 ನೇ ಪ್ರತಿವಾದಿ ನಮ್ಮ ತಾಯಿ ಅನಕ್ಷರಸ್ಥರು ಎಂದು ಅವರು ಗುರ್ತಿಸಿ ಕರಾಗಿಗೆ ಸಹಿ ಮಾಡಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿ ನನಗೆ ಪರಿಚಯ ಇರುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ . 1 ಮತ್ತು 2 ನೇ ಪ್ರತಿವಾದಿಗಳು ನಮ್ಮ ಪಕ್ಕದ ಜಮೀನಿನವರಾಗಿದ್ದು ಅವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿಃ 26-06-2015 ರಂದು ಪ್ರತಿವಾದಿಗಳು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ದಿಃ 26-06-2015 ರಂದು ಬೆಳಗ್ಗೆ ಕ್ರಯದ ಕರಾರಿನ ಮಾತುಕತೆಯಾಗಿದ್ದು ಮದ್ಯಾಹ್ನದ ವೇಳೆಯಲ್ಲಿ ನೋಟರಿಯವರ ಕಛೇರಿಯಲ್ಲಿ ಕರಾರು ಆಗಿರುತ್ತದೆ. ಬೆಳಗ್ಗೆ 10 ಗಂಟೆಯ ಸಮಯದಲ್ಲಿ ಕರಾರಿಗೆ ಮಾತುಕತೆಯಾಗಿರುತ್ತದೆ. ಆ ವೇಳೆಯಲ್ಲಿ ಪ್ರತಿವಾದಿಗಳು ಮತ್ತು ಧರ್ಮರಾಜು ಎಂಬುವವರು ಮಾತುಕತೆಗೆ ಸೇರಿದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿ. ಉಳಿದ ಬೇರೆ ಯಾರು ಕ್ರಯಪತ್ರಕ್ಕೆ ಸಹಿ ಹಾಕಿಲ್ಲ ಎಂದರೆ ಸರಿ 2 ನೇ ಪ್ರತಿವಾದಿ ಸಾಕ್ಷಿಯಾಗಿ ಸಹಿ ಮಾಡಿದ್ದರೋ ಅಥವಾ ಪಕ್ಷಗಾರರಾಗಿ ಸಹಿ ಮಾಡಿದ್ದರೋ ಎಂದರೆ ಸಾಕ್ಷಿಯು ಅವರು ತಾಯಿಯ ಪರವಾಗಿ ಸಹಿ ಮಾಡಿದ್ದು ಮಾತುಕತೆ ವೇಳೆಯಲ್ಲಿ ಹಾಜರಿದ್ದರು ಎಂದು ನುಡಿಯುತ್ತಾರೆ. ನಿಪಿ-2 ಕ್ಕೆ 2 ನೇ ಪ್ರತಿವಾದಿ ಪಕ್ಷಕಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನಿಪಿ-2 ರಲ್ಲಿ ಪಕ್ಷಗಾರರಾಗಿಲ್ಲದಿರುವ ಕಾರಣ ಅವರನ್ನು ದಾವೆಯಲ್ಲಿ ತಪ್ಪಾಗಿ ಪಕ್ಷಗಾರರನ್ನಾಗಿ ಸೇರಿಸಿರುತ್ತೀರಿ ಎಂದರೆ ಸರಿಯಲ್ಲ. ಕ್ರಯದ ಕರಾರಿನ ಒಟ್ಟು ಮೊಬಲಗು 4, 90,000-00 ಪೈಕಿ 1,06,000-00 ಗಳನ್ನು ಮುಂಗಡವಾಗಿ ಪಾವತಿಮಾಡಿರುತ್ತೇವೆ ಎಂದು ದಾವೆಯಲ್ಲಿ ನಮೂದಿಸಿರುತ್ತೀರಿ ಯಾರಿಗೆ ಪಾವತಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾನು 1 ನೇ ಪ್ರತಿವಾದಿಗೆ ಪಾವತಿ ಮಾಡಿರುತ್ತೇನೆ . 500 ಮುಖಬೆಲೆಯ ನೋಟುಗಳನ್ನು ಪಾವತಿ ಮಾಡಿರುತ್ತೇನೆ. 1 ನೇ

ಪ್ರತಿವಾದಿಗೆ ಯಾವ ದಿನಾಂಕದಂದು ನೋಟೀಸ್ ನೀಡಿರುತ್ತೇನೆ ಎಂದು ನನಗೆ ಈಗ ನೆನಪಿರುವುದಿಲ್ಲ. ತಿದ್ದುಪಡಿಗೆ ಸಂಬಂಧಿಸಿದಂತೆ ಪುಟ್ಟಮ್ಮನವರಿಗೆ ಪುನಃ ಯಾವಾಗ ನೋಟೀಸ್ ನೀಡಿರುತ್ತೀರಾ ಎಂದರೆ ನನಗೆ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ನೀಡಿದ ನೋಟೀಸ್ ಗೆ 1 ಹಾಗೂ 2 ನೇ ಪ್ರತಿವಾದಿಗಳು ಮರುತಿಳುವಳಿಕೆ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಹೇಗೆ ಬಂದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ದರಕಾಸ್ತು ಮುಖಾಂತರ 1 ನೇ ಪ್ರತಿವಾದಿ ಗಂಡನಿಗೆ ಬಂದಿದ್ದು ನಂತರ 1 ನೇ ಪ್ರತಿವಾದಿಯ ಜೀವನಾಂಶಕ್ಕಾಗಿ ಬಿಟ್ಟುಕೊಟ್ಟಿರುತ್ತಾರೆ ಎಂದು ತಿಳಿದುಕೊಂಡೆನು. 1 ನೇ ಪ್ರತಿವಾದಿಯ ಜೀವನಂಾಶಕ್ಕಾಗಿ ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿರುವ ಬಗ್ಗೆ ದಾಖಲೆಗಳನ್ನು ಹಾಜಹರುಪಡಿಸಿದ್ದೀರಾ ಎಂದೆರ ಸಾಕ್ಷಿಯು 1 ನೇ ಪ್ರತಿವಾದಿ ಸ್ವತಃ ನನಗೆ ಹೇಳಿರುತ್ತಾರೆ ಎಂದು ನುಡಿಯತ್ತಾರೆ. 1 ನೇ ಪ್ರತಿವಾದಿಯ ಗಂಡ ಮರಣಹೊಂದಿದ ನಂತರ 1 ನೇ ಪ್ರತಿವಾದಿಗೆ ಪೌತಿ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. 1 ನೇೀ ಪ್ರತಿವಾದಿ ಗಂಡ ಮರಣಹೊಂದಿದ ನಂತರ ಅವರ ಕುಟುಂಬದಲ್ಲಿ ವಿಭಾಗವಾದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಪುಟ್ಟಮ್ಮನವರು ನನ್ನ ಜೀವನಾಂಶಕ್ಕಾಗಿ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿ ಕುಟುಂಬದವರ ಪಿತ್ರಾರ್ಜಿತ ಸ್ವತ್ತು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ 8 ಜನ ಮಕ್ಕಳಲ್ಲಿ 5 ಜನ ಗಂಡುಮಕ್ಕಳು 3 ಜನ ಹೆಣ್ಣುಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ನನಗೆ ಆವಿಷಯವನ್ನು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮೊದಲನೆಯವರು ಮಂಜಶೆಟ್ಟಿ, 2 ನೇ ಗಣೇಶ, 3 ಜಯಂತಿ, 4 ಚಂದ್ರ, 5 ಶಾಂತಮ್ಮ, 6 ಪ್ರೇಮಣ್ಣ, 7 ವಸಂತ, 8 ಚಂದ್ರಶೇಖರ್ ಎಂದರೆ ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯ 8 ಜನ ಮಕ್ಕಳಿಗೂ ಸಮಾನವಾದ ಹಕ್ಕಿದೆ ಎಂದೆರ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ನನ್ನ ಜೀವನಾಂಶಕ್ಕಾಗಿ ಬಿಟ್ಟಿದ್ದರು ಎಂದು ತಿಳಿಸಿರುತ್ತಾರೆ.

ದಿಃ 26-06-2015 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರ ಬರೆದುಕೊಡಲು 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ದಿಃ 26-06-2015 ರಂದು ನಾನು ಪ್ರತಿವಾದಿಗಳಿಗೆ ಯಾವುದೇ ರೀತಿಯ ಮುಂಗಡ ಹಣವನ್ನು

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಂತೆ ಕ್ರಯಕ ಕರಾರು ಪತ್ರವನ್ನು ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು.